ಬೇಕು ಎಂದು ಹೇಳಿದ್ದೆವು. ಆತನು ಇದುವರೆಗೂ ಕೇಳಲಿಲ್ಲ. ನಾವು ಏನೂ ಗಮನ ಕೊಡಲು ಸಾಧ್ಯವಾಗಲಿಲ್ಲ.

ಶ್ರೀ ಕೆ. ಕೆಂಚಪ್ಪ.—ಮೊದಲು ಜಮೀನು ಕೇಳಿದ ಅರ್ಜಿಗೆ ಎಷ್ಟು ದಿವಸಗಳಲ್ಲಿ ಉತ್ತರ ಕೊಡಲಾಯಿತು?

ಶ್ರೀ ಎಸ್. ನಿಜಲಿಂಗಪ್ಪ.—ಎರಡು ತಿಂಗಳೊಳಗೆ "available ಇಲ್ಲ" ಎಂದು ಉತ್ತರ ಕೊಡಲಾಯಿತು.

ಶ್ರೀ ಕೆ. ಕೆಂಚಪ್ಪ.—ಈಗ ಏಳು-ಎಂಟು ವರ್ಷಗಳಿಂದಲೂ ಜಮೀನು ಕೊಟ್ಟಿಲ್ಲ. ಮುಂದೆಯಾದರೂ ತಡಮಾಡದೆ ಜಮೀನು ಕೊಡುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಆತನೇ ಬಂದಿಲ್ಲ. ಇಂತಹ ಜಮೀನು ಬೇಕು ಎಂದು ನನಗೆ ಕಾಗದ ಬರೆದರೆ ಎಂಟು ಎಕರೆ ಖುಷ್ಕಿ ಅಥವಾ ಮೂರು ಎಕರೆ ತರಿ ಭೂಮಿಯನ್ನು ಕೊಡಬಹುದು.

Sri V. S. PATIL.—May I know under what circumstances this person died?

Sri S. NIJALINGAPPA.—Both the question and answer show under what circumstances he died.

Sri V. P. DEENADAYALU NAIDU.—Pension of Rs. 15 for five years was sanctioned. Have the Government verified that this amount has been paid to him?

Sri S. NIJALINGAPPA.—Yes, it has been paid to him

Sri V. P. DEENADAYALU NAIDU.—Was there any other case from the Civil Station of this kind?

Mr. SPEAKER.—That is outside the scope of the question.

Starting of Bommanahalli Project in Bellary District

Q.—259. **Sri M. M. PATIL** (Hadagalli).—

Will the Government be pleased to state:—

(*a*) the date of starting of the Bommanahalli Project in Bellary District;

(*b*) whether the sum of two and a half lakhs of rupees provided for this purpose in the Budget has all been spent;

(*c*) whether they are aware of the fact that they had agreed to make a survey for leading water into the Danayakankere, Hospet Taluk, through the supply channel (from the above project);

(*d*) if so, the stage at which the above proposal is pending?

A.—**Sri H. K. VEERANNA GOWDH** (Minister for Public Works).—

(*a*) It has not yet been started.

(*b*) The provision for this work for 1956-57 (last five months) was Rs. 20,000 and that for 1957-58 is Rs. 3 lakhs.

(*c*) and (*d*) No. Investigations have however been carried out and the proposal has not been found to be technically feasible.

ಶ್ರೀ ಎಂ. ಎಂ. ಪಾಟೀಲ್.—ನನ್ನ (a) ಪ್ರಶ್ನೆಗೆ ಉತ್ತರವಾಗಿ ಪ್ರಾಜೆಕ್ಟು ಇನ್ನೂ ಆರಂಭವಾಗಿಲ್ಲ ಎಂದು ಹೇಳಿದೆ. ಆದರೆ ಇನ್ನು ಎಷ್ಟು ಸಮಯದಲ್ಲಿ ಇದರ ಕೆಲಸವನ್ನು ತೆಗೆದುಕೊಳ್ಳುವುದಕ್ಕಾಗುತ್ತದೆ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಈ ಪ್ರಾಜೆಕ್ಟಿನ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಆಲೋಚನೆ ಇದೆ. ಇಷ್ಟು ದಿವಸಗಳಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಇದನ್ನು ಕಟ್ಟಿ ಪೂರೈಸಿದರೆ, ಎಷ್ಟು ಹಣ ಇದರಿಂದ ಉತ್ಪತ್ತಿ ಬರುತ್ತದೆಂಬುದು ಇನ್ನೂ ನಿಗದಿಯಾಗಿಲ್ಲ. ಈ ಪ್ರಾಜೆಕ್ಟಿನ ಕೆಲಸವನ್ನು ಕೈಗೊಳ್ಳುವುದರಿಂದ ನಮಗೆ ಪ್ರತಿಫಲ ಬರುತ್ತದೆಯೇ ಇಲ್ಲವೇ ಎಂಬುದನ್ನು ಯೋಚನೆ ಮಾಡಬೇಕು. ಸಂಸ್ಥಾನ ಸರ್ಕಾರದವರು ಒಂದು ಕಂಡೀಷನ್ ಹಾಕಿ, ಅಲ್ಲಿ ಬರುವ ಫೈನಾನ್ಷಿಯಲ್ ರಿಟರ್ನ್ ಎಷ್ಟೆಂಬುದನ್ನ ತಿಳಿಸಬೇಕೆಂದು ಕೇಳಿದೆ. ಅದು ಬರುವ ನಿರೀಕ್ಷಣೆ ಇರುವ ಕಾರಣ ಇದನ್ನು ತೆಗೆದುಕೊಳ್ಳುವುದಕ್ಕಾಗಲಿಲ್ಲ.

ಶ್ರೀ ಎಂ. ಎಂ. ಪಾಟೀಲ್.—ಪ್ಲಾನಿಂಗ್ ಕಮೀಷನ್ನಿನವರು ಇದನ್ನು ಒಪ್ಪಿಕೊಂಡಿದ್ದಾರೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಪ್ಲಾನಿಂಗ್ ಕಮೀಷನ್ನಿನವರು ಚೆಕ್ನಿಕಲ್ ಆಗಿ ಒಪ್ಪಿದ್ದಾರೆ. ಕೆಲಸ ಕೈಕೊಳ್ಳುವುದಕ್ಕೂ ಸಾಧ್ಯ. ಆದರೆ ಇನ್ನೇನೇನು ಅಂಕಿ ಅಂಶಗಳು ಬೇಕೋ ಅವುಗಳಿಂದ ಪ್ರತಿಫಲ ಚೆನ್ನಾಗಿ ಬರುತ್ತದೆಯೇ ಎಂಬುದನ್ನು ನಿರ್ಧಾರ ಮಾಡಿ ಸಂಸ್ಥಾನ ಸರ್ಕಾರದವರು ಅನುಮತಿ ಕೊಡಬೇಕೆಂದು ಕೇಂದ್ರ ಸರ್ಕಾರದವರು ಹೇಳಿದ್ದಾರೆ.

ಶ್ರೀ ಎಂ. ಎಂ. ಪಾಟೀಲ್.—ನನ್ನ (c) ಪ್ರಶ್ನೆಗೆ ಉತ್ತರವಾಗಿ ವಿಶಿಷ್ಟ ತಾಂತ್ರಿಕ ಕಾರಣಗಳಿಂದ ಈ ಯೋಜನೆಯನ್ನು ಕೈಕೊಳ್ಳುವುದು ಉಪಯುಕ್ತವಲ್ಲ ಎಂದು ಹೇಳಿದೆ. ಆದರೆ ಈಗಿರತಕ್ಕ ಪ್ರೆಸೆಂಟ್‌ಲೆವಲ್‌ಗೆ ನೀರು ಸಾಗಿಸಲು ಸಾಧ್ಯವಿಲ್ಲವೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದನ್ನು ವಿಮರ್ಶೆ ಮಾಡಿ ನೋಡಿದ್ದೇನೆ. ತಗ್ಗಿನಲ್ಲಿರುವ ನೀರನ್ನು ಎತ್ತರವಾದ ಸ್ಥಳಕ್ಕೆ ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ.

ಶ್ರೀ ಎಂ. ಎಂ. ಪಾಟೀಲ್.—ಈ ಯೋಜನೆಯನ್ನು ತೆಗೆದುಕೊಳ್ಳಬೇಕಾದರೆ ನೀರು ಸಾಗಿಸುವ ಬಗ್ಗೆ ಕೆಲವು ಅಡಿಗಳನ್ನು ಎತ್ತರಮಾಡಿ ತೆಗೆದುಕೊಳ್ಳಬಹುದಲ್ಲವೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹಾಗೆ ತೆಗೆದುಕೊಂಡರೂ ಸಾಧ್ಯವಿಲ್ಲ ಎಂದು ನನ್ನ ಅಭಿಪ್ರಾಯ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಪ್ಲಾನಿಂಗ್ ಕಮೀಷನ್ನಿನವರು ಒಪ್ಪಿದ್ದಾರೆಂದು ಹೇಳಿದಿರಿ, 'ಚೆಕ್ನಿಕಲಿ ಫೀಜಿಬಲ್' ಅಲ್ಲ ಎಂದು ಉತ್ತರ ಹೇಳಿದರಿ. ಆದ್ದರಿಂದ ತಮ್ಮ ಜವಾಬಿನಲ್ಲಿ ಯಾವುದು ಸರಿ?

ಶ್ರೀ ಎಚ್. ಕೆ. ವೀರಣ್ಣಗೌಡ.—ತಮ್ಮ (a) ಮತ್ತು (c) ಪ್ರಶ್ನೆಗಳಿಗೆ ಕೊಟ್ಟಿರುವ ಉತ್ತರ ನೋಡಿ.

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್.—ಚೆಕ್ಕಿಕಲ ಫೀಜಬಲ್ ಅಲ್ಲ ಎಂದರೆ ಇದನ್ನು ಕೈಬಿಟ್ಟಿರ್ದಿರೆಂದು ಅರ್ಥಮಾಡಿ ಕೊಳ್ಳೋಣವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ನಾಲೆಯಿಂದ ಕೆರೆಗೆ ನೀರು ತರುವುದು ಚೆಕ್ಕಿಕಲ ಫೀಜಬಲ್ ಅಲ್ಲ. ಆದ್ದರಿಂದ ಅದನ್ನು ಕೈಬಿಟ್ಟಹಾಗೆ.

ಶ್ರೀ ಎಂ. ಎಂ. ಪಾಟೀಲ್.—ಈ ಕೆರೆಗೆ ನೀರು ಯಾವ ಮಾರ್ಗದಿಂದ ತೆಗೆದುಕೊಳ್ಳಬೇಕೆಂಬುದನ್ನು ಸರ್ಕಾರದವರು ಆಲೋಚನೆ ಮಾಡಿದ್ದಾರೆಯೇ?

ಶ್ರೀ ಎಚ್. ಕ. ವೀರಣ್ಣಗೌಡ.—ಕೆರೆಗೆ ನೀರು ಒದಗಿಸುವ ಪ್ರಶ್ನೆಯನ್ನು ತಾವು ಕೇಳಲಿಲ್ಲ.

ಶ್ರೀ ಎಂ. ಎಂ. ಪಾಟೀಲ್.—ಕೆರೆಗೆ ನೀರು ಒದಗಿಸಿ ಕೊಡಬೇಕು ಎನ್ನುವ ಪ್ರಶ್ನೆ ಇರುವುದು.

ಶ್ರೀ ಎಚ್. ಕೆ. ವೀರಣ್ಣಗೌಡ.—ಅಲ್ಲಿಂದ ಕೊಡಲು ಆಗುವುದಿಲ್ಲ ಎಂದು ಹೇಳಿದೆ. ಇನ್ನು ಎಲ್ಲಿಂದ ತರಬೇಕು ಎಂಬ ಪ್ರಶ್ನೆ ಕೇಳಲಿಲ್ಲ.

ಶ್ರೀ ಎಸ್. ನುಬ್ಬಯ್ಯನಾಯಕ್.—ಈ ಕೆಲಸವನ್ನು ಕೈಗೊಳ್ಳದಿದ್ದರೆ 1957-58ನೇ ಸಾಲಿನ ಬಜೆಟ್ಟಿನಲ್ಲಿ 3,20,000 ರೂಪಾಯಿಗಳನ್ನು ಏತಕ್ಕೆ ಇಟ್ಟಿದ್ದೀರಿ ?

ಶ್ರೀ ಎಚ್. ಕೆ. ವೀರಣ್ಣಗೌಡ.—ತಾವು ಕೇಳುತ್ತಿರುವುದು ನಾನು ಹೇಳುತ್ತಿರುವುದು ಒಂದೇ ಎಂದು ಗೊಂದಲ ಮಾಡಿಕೊಂಡಿದ್ದೀರಿ. ಈ ಹಣ ಮಂಜೂರಾಗಿರುವುದು ಬೊಮ್ಮನಹಳ್ಳಿ ಪ್ರಾಜೆಕ್ಟಿಗೆ ಸಾಧ್ಯವಿಲ್ಲ ಎಂದು ಹೇಳಿರುವುದು ನಾಲೆಯಿಂದ ಕೆರೆಗೆ ನೀರು ತರುವುದು.

Dr. R. NAGAN GOWDA.—May I know whether the estimate of this Bommanahalli project was not prepared by the Madras Government when they had decided that it was financially feasible ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದನ್ನು ಮದರಾಸ್ ಗೌರ್ನಮೆಂಟಿನವರು ಮಾಡಿದ್ದಾರೆ ಮತ್ತು ನೀರು ಕೆರೆಗೆ ತರುವುದು ಫೀಜಬಲ್ ಅಲ್ಲ ಎಂದು ಹೇಳಿದ್ದಾರೆ.

Dr. R. NAGAN GOWDA.—Financially ಫೀಜಬಲ್ ಎಂದು ತೀರ್ಮಾನವನ್ನು ಅವರು ಕೊಟ್ಟಿದ್ದಾರೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದರಿಂದ 4.5 ಪರ್ಸೆಂಟ್ ಉತ್ಪತ್ತಿ ಬರುತ್ತದೆ ಎಂದು ಅಂದಾಜು ಮಾಡಿದ್ದಾರೆ. ಇನ್ನೂ ಹೆಚ್ಚಾಗಿ ಬರುವುದಕ್ಕೆ ಸಾಧ್ಯವೇ ನೋಡಿ ಎಂದು ಸೆಂಟ್ರಲ್ ಗೌರ್ನಮೆಂಟಿನವರು ನಮಗೆ ತಿಳಿಸಿದ್ದಾರೆ.

Dr. R. NAGAN GOWDA.—Do the Government expect more than 4.5 per cent from any project ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅವರು ಜಾಸ್ತಿ ಬರುತ್ತದೆಯೋ ನೋಡಿ ಎಂದು ಹೇಳಿದ್ದಾರೆ.

Dr. R. NAGAN GOWDA.—Is 4.5 percent return on any irrigation project satisfactory or not ?

Sri H. K. VEERANNA GOWDH.—That is a different question. It is a matter of opinion.

ಶ್ರೀ ಎಂ. ಎಂ. ಪಾಟೀಲ್.—ಒಂದು ಪಕ್ಷ ರಿಟರ್ನ್ ಜಾಸ್ತಿ ಬರುವುದಿಲ್ಲ ಎಂದು ತಿಳಿದುಬಂದರೆ ಈ ಪ್ರಾಜೆಕ್ಟನ್ನು ಕೈಬಿಡೋಣವಾಗುತ್ತದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹಾಗೆ ಹೇಳಲಿಲ್ಲ.

Repairs to the waste weir (kodi) of Devapur Tank.

Q.—323. Sri B. S. SHANKARAPPA (Hosadurga).—

Will the Government be pleased to state :—

(*a*) whether they are aware of the fact that three years have elapsed since the waste weir (Kodi) of Devapur Tank in Madadakere Hobli, Hosadurga Taluk, was breached ;

(*b*) if so, whether any action has been taken in regard to repairs thereto ;

(*c*) if not, whether they would take up the work at least now and complete it ?

A.—Sri H. K. VEERANNA GOWDH (Minister for Public Works).—

(*a*) Yes.

(*b*) Yes.

(*c*) Does not arise in view of replies to (*a*) and (*b*) above.

ಶ್ರೀ ಬಿ. ಎಸ್. ಶಂಕರಪ್ಪ.—(*b*)ಗೆ ಉತ್ತರವಾಗಿ ಹೌದು ಎಂದು ಹೇಳುತ್ತೀರಿ ? ರಿಪೇರಿ ಆದಮೇಲೆ ಒಡೆದು ಹೋಯಿತೇ ?

* ಶ್ರೀ ಎಚ್. ಕೆ. ವೀರಣ್ಣಗೌಡ.—ಮಧ್ಯೆ ಒಡೆದು ಹೋಗಿತ್ತು ಅದನ್ನು ರಿಪೇರಿ ಮಾಡಲಾಗಿದೆ.

ಶ್ರೀ ಬಿ. ಎಸ್. ಶಂಕರಪ್ಪ.—ಕೆಲಸ ಪೂರ್ತಿಯಾಗಿ ಆಗಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಕೆಲಸ ಪೂರ್ತಿಯಾಗಿ ಆಗಿದೆ. ಆದರೆ ಇತ್ತೀಚೆಗೆ ಕಿತ್ತುಹೋಗಿದೆ.

ಶ್ರೀ ಬಿ. ಎಸ್. ಶಂಕರಪ್ಪ.—ಇದು ಈಚೆಗೆ ಕೋಡಿ ಒಡೆದ ಮೇಲೆ ಕೇಳಿರುವ ಪ್ರಶ್ನೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಅದಕ್ಕೂ ಸಹ ಕೆಲಸ ಪ್ರಾರಂಭಮಾಡುತ್ತೇವೆ. ಸ್ವಲ್ಪ ಕೋಡಿ ಇಳಿಸಬೇಕಾಗಿತ್ತು, ಕೆರೆ ಏರಿ ಬಂದೋಬಸ್ತು ಆಗದೆ ಇರುವುದರಿಂದ ಇಳಿಸಬೇಕಾಗಿತ್ತು. ಆದರೆ ಈಗ ತೂಬಿನ ರಿಪೇರಿ ಆಗಿದೆ.

ಶ್ರೀ ಬಿ. ಎಸ್. ಶಂಕರಪ್ಪ.—ಅಮೃತಮಹಲ್ ಕಾವಲು ಸಾಗುಮಾಡುವುದಕ್ಕೋಸ್ಕರ ಕೋಡಿ ಇಳಿಸಲಿಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ರಿಕಾರ್ಡ್ ಇರುವ ಪ್ರಕಾರ ಏರಿ ಬಂದೋಬಸ್ತು ಆಗಿರಲಿಲ್ಲ.